<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

<u>ಸಿ.ಸಿ. ನಂ. **749 / 2021**</u>

ಸಿಡಬ್ಲ್ಯೂ- **09**
ಪಿಡಬ್ಲ್ಯೂ-**02**

<u>ದಿನಾಂಕಃ **21.08.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಂ.ವಿ.ಕೆ. ರವರಿಂದಃ</u>

ದೂರನ್ನು ಲಿಖಿತ ರೂಪದಲ್ಲಿ ನನಗೆ ನೀಡಿದ್ದರು. ದೂರನ್ನು ನೀಡಲು ಚಾಸಾ-1 ರವರು ಸಂಜೆ 4-30 ಗಂಟೆಗೆ ಅವರು ಒಬ್ಬರೇ ಬಂದಿದ್ದರು. ಜಮೀನಿನಲ್ಲಿ ಬೆಳೆದ ಭತ್ತದ ಸಲುವಾಗಿ ಆರೋಪಿ ಮತ್ತು ಚಾಸಾ-1 ರವರ ತಂಟೆ ಆಗಿತ್ತು ಎಂದರೆ ಸರಿಯಲ್ಲ. ಗುನ್ಹಾ ಸ್ಥಳವು ಜಮೀನಿನಲ್ಲಿ ಇತ್ತು ಎಂದರೆ ಸಾಕ್ಷಿಯು ಖುಲ್ಲಾ ಜಾಗ ಇತ್ತು ಎಂದು ಹೇಳುತ್ತಾರೆ. ಊರು ಬಿಟ್ಟು 2?ಕಿಲೋ ಮೀಟರ್ ಅಂತರದಲ್ಲಿ ಗುನ್ಹಾ ಸ್ಥಳವು ಇತ್ತು. ರಸ್ತೆಯ ಬದಿಗೆ ಜಾಗ ಇರುತ್ತದೆ ಅಲ್ಲಿ ಮನೆಯನ್ನು ಕಟ್ಟಿರುತ್ತಾರೆ, ಸದರಿ ಖುಲ್ಲಾ ಜಾಗದ ಮಾಲೀಕರು ಅಮೀನರೆಡ್ಡಿ ಇರುತ್ತಾರೆ. ಸದರಿ ಜಾಗದ ಸಲುವಾಗಿ ಅಮೀನರೆಡ್ಡಿ ರವರ ಕಡೆಯಿಂದ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಅಮೀನರೆಡ್ಡಿ ರವರ ಹೇಳಿಕೆಯನ್ನು ನಾನು ದಾಖಲಿಸಿಕೊಂಡಿರುವುದಿಲ್ಲ. ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿ ಮುದ್ದೆ ಮಾಲು ಒಂದನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಪೋಟೋಗಳನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 11.06.2021 ರಂದು ಚಾಸಾ-1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕಃ 11.06.2021 ರಂದು ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಜಮೀನಿನ ಕಾಗದ ಪತ್ರವನ್ನು ಪಡೆಯುವ ಸಲುವಾಗಿ ಚಾಸಾ-1 ರವರಿಗೆ ನೋಟೀಸ್ ನ್ನು ನೀಡಿದ್ದೆ ಆದರೆ ಅವರು ಕಾಗದ ಪತ್ರಗಳನ್ನು ಹಾಜರುಪಡಿಸಿರಲಿಲ್ಲ ಆರ್ ಎ ನಂಃ 57/2015 ರ ತೀರ್ಪಿನಲ್ಲಿ ಏನು ವಿಷಯ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಆರ್ ಎಸ್ ಎ ನಂಃ 200121/2017 ನೇದ್ದರಲ್ಲಿ ಏನು ತೀರ್ಪು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ದಿನಾಂಕಃ 21.06.2021 ರಂದು ದ.ಪ್ರ.ಸಂ ಕಲಂಃ 164ರ ಅಡಿಯಲ್ಲಿ ಚಾಸಾ-1ರವರ ಹೇಳಿಕೆಯನ್ನು ದಾಖಲಿಸಲು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಘಟನೆ ಆಗದಿದ್ದರು ಸಹ ಚಾಸಾ-1ರವರ ಮಾತನ್ನು ಕೇಳಿ ನಾನು ಕಚೇರಿಯಲ್ಲಿ ಕುಳಿತು ಸುಳ್ಳು ದಾಖಲಾತಿಗಳನ್ನು ಸೃಷ್ಟಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ**.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ**.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 749 / 2021

ಸಿಡಬ್ಲ್ಯೂ- **09**
ಪಿಡಬ್ಲ್ಯೂ-**02**

ದಿನಾಂಕಃ **21.08.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಪಂಚನಾಮೆಯ ಕಾಲಕ್ಕೆ ಪೋಟೋವನ್ನು ತೆಗೆದಿದ್ದೆ ಮತ್ತು ಕಚ್ಚಾ ಆಫ್ ನಕಾಶೆಯನ್ನು ತಯಾರಿಸಿದ್ದೆ, ಅದೇ ರೀತಿ ಕಟ್ಟಿಗೆಯನ್ನು ಜಪ್ತಿಪಡಿಸಿಕೊಂಡಿದ್ದೆ. ದಿನಾಂಕಃ 11.06.2021 ರಂದು ಚಾಸಾ-1 ರವರ ಪುರವಣಿ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೆ. ಚಾಸಾ-4 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರಿಗೆ ನೋಟೀಸ್ ಕೊಟ್ಟಿದ್ದೆ. ದಿನಾಂಕಃ 17.06.2021 ರಂದು ಸಾಕ್ಷಿ-1 ರವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ವಿನಂತಿಸಿಕೊಂಡಿದ್ದೆ. ದಿನಾಂಕಃ 21.06.2021 ರಂದು ದ.ಪ್ರ.ಸಂ ಕಲಂಃ 164 ರ ಅಡಿಯಲ್ಲಿ ಚಾಸಾ-1 ರವರ ಹೇಳಿಕೆಯನ್ನು ಮಾನ್ಯ ನ್ಯಾಯಾಲಯವು ದಾಖಲಿಸಿಕೊಂಡಿದ್ದೆ. ದಿನಾಂಕಃ 29.06.2021 ರಂದು ಆರೋಪಿತನನ್ನು ದಸ್ತಗಿರಿ ಮಾಡಿದ್ದೆ. ಅದೇ ದಿನ ಸಾಕ್ಷಿ-1 ರವರು ಹಾಜರುಪಡಿಸಿದ ಸಿವಿಲ್ ದಾವೆಯ ತೀರ್ಪಿನ ಪ್ರತಿಯನ್ನು ನಾನು ಸ್ವೀಕರಿಸಿದ್ದೆ. ದಿನಾಂಕಃ 11.06.2021 ರಂದು ಆರೋಪಿತನು ಮೆಲ್ಮನವಿಯ ಆದೇಶದ ಪ್ರತಿಗಳನ್ನು ಹಾಜರುಪಡಿಸಿದ್ದನ್ನು ಅವುಗಳನ್ನು ಸ್ವೀಕರಿಸಿಕೊಂಡಿದ್ದೆ. ದಿನಾಂಕಃ 17.06.2021 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಾನು ಪಡೆದುಕೊಂಡಿದ್ದೆ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-10 ರವರಿಗೆ ವಹಿಸಿದ್ದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ಹಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು

ಅವುಗಳನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಕಚ್ಚಾ ಆಫ್ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-1 ರವರಿಗೆ ನೀಡಿದ ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 14.06.2021 ರ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 4 ನ್ನು ನೋಡಿ ಗುರುತಿಸಿದ್ದು. ಸಾಕ್ಷಿಯು ಬಡಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿರುತ್ತದೆ. ಆರೋಪಿತನನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆತನ್ನು ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ಸಾಕ್ಷಿಯು ಆರ್ ನಂಃ 57/2015 ರ ನೆರಳಚ್ಚು ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರ್ ಎಸ್ ಎ ನಂಃ 200121/2017 ರ ನೆರಳಚ್ಚು ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಂ.ವಿ.ಕೆ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲನ್ನು 3 ಗಂಟೆಗೆ ಮಾಡುತ್ತೇನೆ ಎಂದು ಹೇಳಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.